**ಶ್ರೀ ಎಸ್.ಆರ್. ಮೋರೆ** : ಮಾನ್ಯ ಸದಸ್ಯರು ಏನು ಸಪ್ಲಿಮೆಂಟರಿ ಕೊಶ್ಚನ್ ಕೇಳಿರತಕ್ಕಂಥದ್ದು ನನಗೆ ಗೊತ್ತಿಲ್ಲ. ಅವರು ಹೇಳಿರತಕ್ಕಂಥದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಅವರಿಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ನಿಜವಾಗಿಯೂ ಕೂಡ He is honest.

**ಶ್ರೀ ಸಿ. ರಾಜೇಂದ್ರವರ್ಮ** : ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಿರುವುದರಿಂದ ನಾವು ಕೇಳಬೇಕಾಗುತ್ತದೆ.

**ಅಧ್ಯಕ್ಷರು** : ದಯಮಾಡಿ ಕುಳಿತುಕೊಳ್ಳಿ. ಈ ರೀತಿಯಲ್ಲಿ ಪ್ರಶ್ನೋತ್ತರ ವೇಳೆ ಮಾಡಿದರೆ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ ಮುಕ್ಕಾಲು ಗಂಟೆಯಾಗಿದೆ. ಇನ್ನು ನಮ್ಮ 9 ಪ್ರಶ್ನೆ ಇದೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರೇ, ನಿಮ್ಮ ಪ್ರಶ್ನೆಯನ್ನು ದಯವಿಟ್ಟು ಕೇಳಿ. ದಯಮಾಡಿ ತಾವು ಕುಳಿತುಕೊಳ್ಳಿ.

**ಶ್ರೀ ಸಿ. ರಾಜೇಂದ್ರವರ್ಮ** : ಮಾನ್ಯ ಅಧ್ಯಕ್ಷರೆ, ತಾವು ಹೊಸಬರಿಗೆ ಅವಕಾಶ ಮಾಡಿಕೊಡಬೇಕು.

**ಅಧ್ಯಕ್ಷರು** : ನಾನು ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರನ್ನು ಮಾತನಾಡುವುದಕ್ಕೆ ಹೇಳಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಸಿ. ರಾಜೇಂದ್ರವರ್ಮ** ; ಇದು ಮಹತ್ವವಾದ ಪ್ರಶ್ನೆ ಇದೆ. ತಾವು ದಯವಿಟ್ಟು ಅವಕಾಶ ಕೊಡಿ. ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

**ಅಧ್ಯಕ್ಷರು** : ಈ ರೀತಿಯಾದರೆ ಪ್ರಶ್ನೋತ್ತರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಸಿ. ರಾಜೇಂದ್ರವರ್ಮ** : ವಿಶ್ವ ಗುರು ಬಸವಣ್ಣನವರು ಮಹಾತ್ಮ ಗೌತಮ ಬುದ್ಧ ಮತ್ತು ಯೇಸುಕ್ರಿಸ್ತರ ಸಾಲಿನಲ್ಲಿ ಬರತಕ್ಕಂಥ ವ್ಯಕ್ತಿ.

**ಅಧ್ಯಕ್ಷರು** : ಒಂದು ಪ್ರಶ್ನೆಗೆ ಎಲ್ಲರೂ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ನಮ್ಮ ಮುಂದೆ ಇರತಕ್ಕಂಥ ಎಲ್ಲಾ ಪ್ರಶ್ನೆಗಳನ್ನು ಮುಗಿಸುವುದಕ್ಕೆ ಆಗುತ್ತದೆಯೇ ? I cannot understand ಮಾನ್ಯ ಸದಸ್ಯರು ಕೇಳಿರತಕ್ಕಂಥದಕ್ಕೆ ಮಾನ್ಯ ಸಚಿವರು ಬೇಗ ಉತ್ತರ ಕೊಡಿ.

**ಶ್ರೀ ಸಿ. ರಾಜೇಂದ್ರವರ್ಮ** : ನಿಮ್ಮ ಅಪ್ಪಣೆ ಮೀರಿ ನಾವು ಹೋಗುವುದಿಲ್ಲ. ಆದ್ದರಿಂದ ನಾನು ಕುಳಿತುಕೊಳ್ಳುತ್ತೇನೆ. ಮಾನ್ಯ ಸಿಂಧ್ಯರವರಿಗೆ ಈ ವಿಷಯ ಗೊತ್ತಿದೆ. ಆದ್ದರಿಂದ ಸರ್ಕಾರದ ಪರವಾಗಿ ತಾವು ಅವರಿಗೆ ಹೇಳಿದರೆ ಬಹಳ ಉತ್ತಮವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಮಾನ್ಯ ಸಚಿವರು ಅಧಿವೇಶನ ನಂತರ ಬೀದರ್ ಜಿಲ್ಲೆಗೆ ಬಂದಾಗ ಬಸವಕಲ್ಯಾಣ ತಾಲ್ಲೂಕಿಗೆ ಬರುತ್ತಾರೆ. ಮತ್ತೆ ಇದನ್ನೆಲ್ಲಾ ಪರಿಗಣಿಸುತ್ತಾರೆ. ಮತ್ತು ತಾವು ಹೇಳಿರತಕ್ಕಂಥ ಸಲಹೆಗಳನ್ನು ಮಾನ್ಯ ಸಚಿವರಿಗೆ ತಿಳಿಸಿದ್ದೇನೆ. ಅವರು ಅದನ್ನು ಖಂಡಿತ ಮಾಡುತ್ತಾರೆ.

**ದೇವನ ಹಳ್ಳಿ ಬಳಿ ನಿರ್ಮಿಸಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯಪ್ರಗತಿ**

52(173) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ರಾಜ್ಯ ಸರ್ಕಾರ ಸ್ವಾಧೀನ ಪಡಿಸಿಕೊಂಡ ಸರ್ಕಾರಿ ಹಾಗೂ ಖಾಸಗಿ ಜಮೀನೆಷ್ಟು ;

ಆ) ಇದಕ್ಕಾಗಿ ಇಲ್ಲಿಯವರೆಗೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು ;

ಇ) ಕೇಂದ್ರ ಸರ್ಕಾರದಿಂದ ಈ ಕಾಮಗಾರಿಗಾಗಿ ಇಲ್ಲಿಯವರೆಗೆ ಬಂದ ಹಣವೆಷ್ಟು ;

ಈ) ಈ ಉದ್ದೇಶಿತ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಕೇಂದ್ರ ಸರ್ಕಾರದಿಂದ ಎಲ್ಲಾ ಅನುಮೋದನೆಗಳು ದೊರಕಿದೆಯೇ ;

ಉ) ಈ ಉದ್ದೇಶಿತ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯ ಈಗ ಯಾವ ಹಂತದಲ್ಲಿರುವುದು ; ಇತ್ತೀಚಿನ ಪ್ರಗತಿ ಏನು ;

ಊ) ಈ ವಿಮಾನ ನಿಲ್ದಾಣ ಯಾವಾಗ ಕಾರ್ಯರಂಭಗೊಳ್ಳುವ ನಿರೀಕ್ಷೆ ಇದೆ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಗೆ ಪ್ರಸ್ತಾವಿಸಿದ ಜಮೀನಿನ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ವಿವರಗಳು | ಜಮೀನಿನ ಪ್ರದೇಶ ಎಕರೆ – ಗುಂಟೆಗಳು |
|---|---|---|
| 01 | ಕೆಐಎಡಿಬಿಯಿಂದ ಭೂ ಸ್ವಾಧೀನಗೊಂಡ ಖಾಸಗಿ ಜಮೀನು | 2469–011/2 |
| 02 | ಅರಣ್ಯ ಜಮೀನು (ಗುತ್ತಿಗೆ ಮೇಲೆ) | 1394–20 |
| 03 | ಸರ್ಕಾರಿ ಜಮೀನು | 403–06 |
| | **ಒಟ್ಟು** | **403-06** |

ಆ) 2004ರ ಜೂನ್ ರವರೆಗೆ ಇದ್ದಂತೆ ಸರ್ಕಾರವು ಯೋಜನೆಯ ಮೇಲೆ ನೇರವಾಗಿ ರೂ. 96.015 ಕೋಟಿಗಳ ವೆಚ್ಚವನ್ನು ಮಾಡಿದೆ. ಇದಲ್ಲದೆ. ಯೋಜನೆಯ ಭೂ ಸ್ವಾಧೀನಕ್ಕಾಗಿ ಮತ್ತು ಸಂಬಂಧಿಸಿದ ಇತರೆ ವೆಚ್ಚಗಳಿಗೆ ಕೆ.ಎಸ್.ಐ.ಐ.ಡಿ.ಸಿ.ಯು ರೂ. 124.50 ಕೋಟಿಗಳ ವೆಚ್ಚ ಮಾಡಿದೆ.

ಇ) ಭಾರತ ಸರ್ಕಾರವು, ಭಾರತೀಯ ವೈಮಾನಿಕ ಪ್ರಾಧಿಕಾರದ ಮೂಲಕ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದಲ್ಲಿನ ಸೂಚಿತ ಶೇಕಡಾ 13ರ ಷೇರು ಬಂಡವಾಳದ ಪಾಲಿಗೆ ಹೂಡಿಕೆ ಮಾಡಲಿದೆ. ಸುಮಾರು ರೂ. 42.00 (ಕೋಟಿಗಳು) ಇದರಲ್ಲಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದಲ್ಲಿನ (ಬಿಐಎಎಲ್) ಷೇರು ಬಂಡವಾಳವಾಗಿ ತನ್ನ ಪಾಲಿನ ರೂ. 3.80 ಕೋಟಿಗಳ ಮುಂಗಡ ಮೊತ್ತವನ್ನು ಇಲ್ಲಿಯವರೆಗೆ ಸ್ವೀಕರಿಸಲಾಗಿದೆ.

ಈ) ಯೋಜನೆಗೆ ಬೇಕಾದ ಎಲ್ಲ ಮೂಲ ಅನುಮೋದನೆಗಳನ್ನು ಭಾರತ ಸರ್ಕಾರದಿಂದ ದೊರೆತಿದೆ. ಆದರೂ ಈ ಕೆಳಕಂಡ ಅನುಮೋದನೆಗಳನ್ನು ನಿರೀಕ್ಷಿಸಲಾಗಿದೆ.

1) ರಕ್ಷಣಾ ಮಂತ್ರಾಲಯದಿಂದ ಮಾರ್ಪಾಟಿತ ನಿರಾಕ್ಷೇಪಣೆ ಪ್ರಮಾಣ ಪತ್ರ (ರಕ್ಷಣಾ ಮಂತ್ರಾಲಯ)

2) ವಿಮಾನ ಯಾವ ನಿಯಮಗಳಿಗೆ ತಿದ್ದುಪಡಿ

3) ವಾಯು ಸಂಚಾರ ನಿಯಂತ್ರಣದ ಎತ್ತರದ ಬಗ್ಗೆ ನಾಗರೀಕ ವಿಮಾನ ಯಾನ ನಿರ್ದೇಶಕರಿಂದ ಅನುಮೋದನೆ

4) ಕಣ್ಗಾವಲು ಉಪಕರಣ ಸೇವೆಗಳು/ವಾಯು ಸಂಚಾರ ನಿರ್ವಹಣೆ ಬಗ್ಗೆ ಭಾರತೀಯ ವೈಮಾನಿಕ ಪ್ರಾಧಿಕಾರ ಮತ್ತು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದ ನಡುವಿನ ಒಪ್ಪಂದ

5) ರಿಯಾಯಿತಿ ಒಪ್ಪಂದದ ಪರಿಣಾಮವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಸಮನ್ವಯ ಒಪ್ಪಂದ

ಊ) ವಿಮಾನ ನಿಲ್ದಾಣದ ನಿರ್ಮಾಣ ಕೆಲಸವು ಇನ್ನು ಪ್ರಾರಂಭವಾಗಬೇಕಾಗಿದೆ. ಭಾರತ ಸರ್ಕಾರ ಮತ್ತು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದ ನಡುವೆ ಇತ್ತೀಚೆಗೆ ನವ ದೆಹಲಿಯಲ್ಲಿ ದಿನಾಂಕ 5-7-2004 ರಂದು ರಿಯಾಯಿತಿ ಒಪ್ಪಂದಕ್ಕೆ ಸಹಿಯಾಗಿದೆ, ಇದನ್ನು ಅನುಸರಿಸಿ ರಾಜ್ಯ ಸರ್ಕಾರವು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದೊಂದಿಗೆ ರಾಜ್ಯ ಒತ್ತಾಸೆ ಒಪ್ಪಂದದ ಬಗ್ಗೆ ಮತ್ತು ಕೆ.ಎಸ್.ಐ.ಐ.ಡಿ.ಸಿ. ಮತ್ತು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದ ನಡುವೆ ಭೂ ಗುತ್ತಿಗೆ ಒಪ್ಪಂದದ ಬಗ್ಗೆ ಸಹಿಯಾಗಬೇಕಾಗಿದೆ. ಇವುಗಳು ಅಂತಿಮ ಹಂತದಲ್ಲಿವೆ. ಏತನ್ಮಧ್ಯೆ, ಯೋಜನೆಯ ಹಣಕಾಸು ಸಮಾಪ್ತಿಯನ್ನು ಸಾಧಿಸಲು ಐ.ಸಿ.ಐ.ಸಿ.ಐ ಬ್ಯಾಂಕ್ ಹಣಕಾಸಿನ ಅಂಕಿ ಸಂಖ್ಯೆ ಚೊಕ್ಕಗೊಳಿಸುವುದು ಮತ್ತು ಇತ್ಯರ್ಥಗೊಂಡ ಯೋಜನಾ ಒಪ್ಪಂದಗಳ ಪುನರಾವಲೋಕವ ಸೇರಿದಂತೆ ಯೋಜನೆಯ ಅಂತಿಮ ಕಾರ್ಯ ಕ್ಷಮತೆಯನ್ನು (final due deligence) ಕೈಗೆತ್ತಿಕೊಂಡಿದೆ.

ಊ) ಈ ಮೇಲೆ ವಿವರಿಸಿದಂತೆ ಯೋಜನೆಯ ಹಣಕಾಸು ಸಮಾಪ್ತಿಯ ಸಾಧಿಸಿದ ತರುವಾಯ ನಿರ್ಮಾಣ ಕಾರ್ಯವನ್ನು ತಕ್ಷಣವೇ ಪ್ರಾರಂಭಿಸಲಾಗುವುದು ಪ್ರಸ್ತುತ ವಿದ್ಯಮಾನಗಳನ್ನು ಆಧಾರಿಸಿದಲ್ಲಿ ನವೆಂಬರ್ 2004ರ ಹೊತ್ತಿಗೆ ನಿವೇಶನದ ಬಳಿ ನಿರ್ಮಾಣ ಕಾರ್ಯವು ಪ್ರಾರಂಭವಾಗುವ ನಿರೀಕ್ಷೆಯಿದೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕಾಗಿ ಇಲ್ಲಿಯತನಕ ರಾಜ್ಯ ಸರ್ಕಾರ 220 ಕೋಟಿ 51 ಲಕ್ಷದ 50 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿದೆ ಎಂದು ಹೇಳಿದ್ದಾರೆ. ಈ ಪ್ರಾಜೆಕ್ಟ್‌ನ ಟೋಟಲ್ ಕಾಸ್ಟ್ ಎಷ್ಟಾಗುತ್ತದೆ ? ಮತ್ತೆ ಇದಕ್ಕೆ ಕೇಂದ್ರದ ಪಾಲು 42 ಕೋಟಿ ರೂಪಾಯಿ ಎಂದು ಹೇಳಿದ್ದೀರಿ ಆದ್ದರಿಂದ ಈ ಪ್ರಾಜೆಕ್ಟ್‌ನಲ್ಲಿ ನಮ್ಮ ರಾಜ್ಯ ಸರ್ಕಾರದ ಪಾಲೆಷ್ಟು ಎಂಬುದನ್ನು ತಿಳಿಸಬೇಕು. ಈ ಪ್ರಾಜೆಕ್ಟ್ ನಿರ್ಮಾಣ ಮಾಡಲು ಯಾವ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದೀರಿ ಎಂದು ಮತ್ತು ಎಷ್ಟು ವರ್ಷಕ್ಕಾಗಿ ಒಪ್ಪಂದ ಮಾಡಿಕೊಂಡಿದ್ದೀರಿ ಎಂಬುದು ಮತ್ತು ಇದನ್ನು ಪ್ರಾರಂಭ ಮಾಡತಕ್ಕಂಥ ಒಂದು ಅಂದಾಜು ದಿನಾಂಕವನ್ನು ತಾವು ಹೇಳಿದ್ದೀರಿ. ಕರಾರುವಕ್ಕಾಗಿ ಯಾವಾಗ ಪ್ರಾರಂಭ ಮಾಡುತ್ತೀರೆಂಬುದನ್ನು ಮತ್ತು ಈ ಪ್ರಾಜೆಕ್ಟ್ ಮುಗಿಸುವುದಕ್ಕೆ ಎಷ್ಟು ದಿವಸವಾಗುತ್ತದೆ ಎನ್ನತಕ್ಕಂಥ ವಿವರವನ್ನು ನೀಡಬೇಕೆಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಸದಸ್ಯರಾದ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಪ್ರಶ್ನೆ ಹಾಕುವುದರ ಬಗ್ಗೆ ಬಹಳ ಹೋಂ ವರ್ಕ್‌ನ್ನು ಮಾಡಿದ್ದಾರೆ. ಈ ಸಾರಿ ಅವರು ಸ್ವಲ್ಪ ಎಡವಿದ್ದಾರೆ

ಎಂದು ನಾನು ತಿಳಿದುಕೊಂಡಿದ್ದೇನೆ ಅವರು ಕೇಳಿರತಕ್ಕಂತಹ ಎಲ್ಲಾ ಉಪಪ್ರಶ್ನೆಗಳಿಗೂ ಸಹಿತ ಪ್ರತ್ಯೇಕವಾದಂತಹ ಪ್ರಶ್ನೆಯನ್ನೇ ಹಾಕಬೇಕಾಗುತ್ತದೆ. ಆದರೂ ಸಹಿತ Since I am prepared with that ನಾನು ಉತ್ತರವನ್ನು ಕೊಡುತ್ತಿದ್ದೇನೆ. ಒಂದು ಪ್ರಾಜೆಕ್ಟ್‌ನ ಟೋಟಲ್ ಕಾಸ್ಟ್ ಕೇಳಿದ್ದೀರಿ It will be around 1300 crores. 1300 ಕೋಟಿ ರೂಪಾಯಿಗಳಷ್ಟು ಆಗುತ್ತದೆ, Build, own and Operate ಆ ಆಧಾರದ ಮೇಲೆ ಬಿಒಟಿ ಆಧಾರದ ಮೇಲೆ ನಾವು ಅದನ್ನು ಮಾಡುತ್ತಿದ್ದೇವೆ, ನೀವು ಯಾರ್ಯಾರು ಎಷ್ಟೆಷ್ಟು ಇದರಲ್ಲಿ ಷೇರುದಾರರು ಆಗಿದ್ದಾರೆಂದು ಕೇಳಿದ್ದಾರೆ, ಕೇಂದ್ರ ಸರ್ಕಾರದವರು ಏರ್‌ಪೋರ್ಟ್ ಅಥಾರಿಟಿ ಇಂಡಿಯಾ ಮೂಲಕವಾಗಿ 13 ಪರ್ಸೆಂಟ್ ಷೇರು ಹೋಲ್ಡರ್ಸ್‌ಗಳು ಇದ್ದಾರೆ ಈ ಬಿ.ಎ.ಐ.ಎಲ್. ಕಂಪನಿಯಲ್ಲಿ Bangalore International Airport Limited ಎನ್ನುವ ಒಂದು ಕಂಪನಿಯನ್ನು ಮಾಡಿದ್ದೇವೆ. ಆ ಕಂಪನಿಗೆ ಗೌರ್ನಮೆಂಟ್ ಆಫ್ ಇಂಡಿಯಾದವರು 13 ಪರ್ಸೆಂಟ್ ಭಾಗವಹಿಸಿದ್ದಾರೆ. ರಾಜ್ಯ ಸರ್ಕಾರದವರು 13 ಪರ್ಸೆಂಟ್ ನಾವು ಭಾಗವಹಿಸುತ್ತಿದ್ದೇವೆ. ಲಾರ್ಸನ್ ಅಂಡ್ ಟ್ಯೂಬ್ರೊದವರು 17 ಪರ್ಸೆಂಟ್ ಭಾಗವಹಿಸಿದ್ದಾರೆ, ಸೀಮೆನ್ಸ್‌ನವರು 40% ಇದನ್ನು ಬಿಲ್ಡ್ ಮಾಡಿ ಅಪರೇಟ್ ಮಾಡುತ್ತಾರೆ ಜ್ಯೂರಿಕ್ ಕಂಪನಿಯವರು 17 ಪರ್ಸೆಂಟ್, ಒಟ್ಟು 100 ಪರ್ಸೆಂಟ್ ಆಗುತ್ತದೆ. ಈಗ ಏರ್‌ಪೋರ್ಟ್‌ಗಳನ್ನು ಕಟ್ಟಬೇಕಾದರೆ ನಮ್ಮ ರಾಷ್ಟ್ರದಲ್ಲಿ ಏರ್ ಪೋರ್ಟ್ ಆಥಾರಿಟಿ ಆಫ್ ಇಂಡಿಯಾದವರಿಗೆ ಮಾತ್ರ ಪರ್ಮಿಶನ್ ಇರತಕ್ಕಂಥದ್ದು, ಬೇರೆ ಯಾರಿಗೂ ಸಹಿತ ಅವಕಾಶವಿಲ್ಲ. ಅದನ್ನು ಬಿಎಎಲ್‌ನವರು ಕಟ್ಟಬಹುದು ಎಂದು ಒಂದು ಕನ್‌ಸಿಷನ್ ಅಗ್ರಿಮೆಂಟ್‌ಗೆ ನಾವು ಸೈನ್ ಮಾಡಿದ್ದೇವೆ. ನಾನು ಉತ್ತರದಲ್ಲಿ ಇನ್ಯಾವ ಅಗ್ರಿಮೆಂಟ್ ಬಾಕಿ ಇದೆ ಎಂಬುದರ ಬಗ್ಗೆ ತಮಗೆ ಕೊಟ್ಟಿದ್ದೇನೆ. ಈ ಎಲ್ಲಾ ಅಗ್ರಿಮೆಂಟ್ಸ್‌ಗಳು ಆಗಸ್ಟ್–ಸೆಪ್ಟೆಂಬರ್–ಅಕ್ಟೋಬರ್ ತಿಂಗಳೊಳಗೆ ಮುಗಿಯುವುದರಲ್ಲಿ ನವೆಂಬರ್ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡತಕ್ಕಂತ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ಸನ್ಮಾನ್ಯ ಅಧ್ಯಕ್ಷರೆ, ಎಷ್ಟು ವರ್ಷಕ್ಕೆ ತಾವು ಆ ಬೂಟ್ ಕಂಪನಿಗೆ ಲೀಸ್ ಕೊಡುತ್ತಿದ್ದೀರಿ, ನಾವು ಬಂಡವಾಳವನ್ನು ಹಾಕುತ್ತಿದ್ದೇವಲ್ಲಾ. ರಾಜ್ಯಸರ್ಕಾರದ, ಅದಕ್ಕೆ ಅವರು ಮರುಪಾವತಿಗಾಗಿ ಇಂಟರೆಸ್ಟ್‌ನ್ನು ಕೊಡುತ್ತಾರಾ ? ಇಲ್ಲಾ ಅವರಿಗೆ ಪುಕ್ಕಟೆಯಾಗಿ ಕೊಟ್ಟಿದ್ದೇವಾ ? ಲ್ಯಾಂಡ್ ಮತ್ತೆ ಆ ಪ್ರಾಜೆಕ್ಟ್ ನಿಮ್ಮ ಕೈಗೆ ಬರುವುದು ಯಾವಾಗ ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಅಧ್ಯಕ್ಷರೆ, ರಾಜ್ಯಸರ್ಕಾರದವರು ಸುಮಾರು ಇಕ್ವಿಟಿ ರೂಪದಲ್ಲಿ 42 ಕೋಟಿ ರೂಪಾಯಿಗಳು, ಸ್ಟೇಟ್ ಸಪೋರ್ಟ್ 350 ಕೋಟಿ ರೂಪಾಯಿಗಳು ಒಟ್ಟು ಸುಮಾರು 392 ಕೋಟಿ ರೂಪಾಯಿಗಳು ಅಥವಾ 400 ಕೋಟಿ ರೂಪಾಯಿಗಳನ್ನು 13 ಪರ್ಸೆಂಟ್ ಷೇರು ಅಲ್ಲದೆ ಕೊಡುತ್ತಿದ್ದೇವೆ ಅಂದರೆ 42 ಪರ್ಸೆಂಟ್ ಇಕ್ವಿಟಿ ಬರುತ್ತದೆ. ಅದಲ್ಲದೆ budgetory support 350 ಕೋಟಿ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ, ಸುಮಾರು 4266 ಎಕರೆ ಜಮೀನನ್ನು ಲೀಸ್ ಬೇಸಿಸ್ ಮೇಲೆ ಸುಮಾರು 30 ವರ್ಷಕ್ಕೆ ಕೊಡುತ್ತಿದ್ದೇವೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನಾವು 300 ಕೋಟಿ ರೂಪಾಯಿಗಳನ್ನು ಹಾಕುತ್ತಿದ್ದೇವೆಂದು ತಾವು ಹೇಳುತ್ತಿದ್ದೀರಲ್ಲಾ, ಈ 350 ಕೋಟಿ ರೂಪಾಯಿಗಳಿಗೆ ಅವರು ನಮಗೇನಾದರೂ ಬಡ್ಡಿಯನ್ನು ಕೊಡುತ್ತಾರಾ ? ಇಲ್ಲಾ ನಾವು ಅವರಿಗೆ ಫ್ರೀಯಾಗಿ ಏನಾದರೂ ಕೊಡುತ್ತಿದ್ದೇವಾ ? ಏನೂ ಅಂತ ಇಲ್ಲಿ ನಾವು ಬಂಡವಾಳವನ್ನು ಹಾಕಿದ್ದೇವೆ.

**SRI P.G.R. SINDIA** : We are also owners, so, ಅದಕ್ಕೋಸ್ಕರ we are going to participate in that.

**SRI KATTA SUBRAMANYA NAIDU** : But they gaining out of it, ಅವರು ಲಾಭವನ್ನು ಪಡೆದುಕೊಳ್ಳುತ್ತಾರೆ, ಇದರ ಮೇಲೆ ನಮಗೆ ಇಂಟರೆಸ್ಟ್ ಕೊಡುವುದಿಲ್ಲವಾ ಎಂದು ನಾನು ಕೇಳುತ್ತಿರುವುದು. ನಮ್ಮದು 350 ಕೋಟಿ ರೂಪಾಯಿಗಳ ಬಂಡವಾಳ ಇರುತ್ತದೆ, ಈ ಬಂಡವಾಳಕ್ಕೆ ಅವರು ನಮಗೇನಾದರೂ ಬಡ್ಡಿಯನ್ನು ಕೊಡುತ್ತಾರಾ ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಈಗ 3 ವರ್ಷದ ಆದ ಮೇಲೆ ಏರ್‌ಪೋರ್ಟ್ ಕಟ್ಟಿ ಆಗುತ್ತದೆ. ಅದು ಆದಮೇಲೆ ಬರತಕ್ಕಂತಹ ಲಾಭಾಂಶ ಏನು ಇದ ಆ ಲಾಭಾಂಶದಲ್ಲಿ ನಮಗೂ ಸಹಿತ ಸಿಗುತ್ತದೆ. ಲ್ಯಾಂಡ್ ಆಕ್ಸಿಜಿಷನ್ ಮಾಡುವುದರ ಬಗ್ಗೆ

**ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು** : ಇದಕ್ಕೆ ಇಂಟರೆಸ್ಟ್ ಏನು ಇಲ್ಲವೇ ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಇಂಟರೆಸ್ಟ್ ಏನೂ ಇಲ್ಲ, ಲಾಭಾಂಶ ಇರುತ್ತದೆ ಅಷ್ಟೆ. ನಾವು ಬಂಡವಾಳವನ್ನು ಹಾಕುತ್ತಿದ್ದೇವೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನಾನು ಕಳೆದ ಸಲ ಪ್ರಶ್ನೆ ಕೇಳಿದೆ, ಇದಕ್ಕೆ 3 ಪರ್ಸೆಂಟ್ ಇಂಟರೆಸ್ಟ್ ಕೊಡುತ್ತಾರೆ. ಕೆಲವು ವರ್ಷವಾದ ನಂತರ 6 ಪರ್ಸೆಂಟ್ ಕೊಡುತ್ತಾರೆ ಎಂದು ಉತ್ತರವನ್ನು ಕೊಟ್ಟಿದ್ದರು. ಅದಕ್ಕೋಸ್ಕರ ನಾನು ತಮ್ಮನ್ನು ಕೇಳಿದೆ. ಆಮೇಲೆ ಒಂದು ಕಾರಿಡಾರ್ ರೋಡ್ ಮಾಡುತ್ತೇವೆಂದು ಹೇಳಿದ್ದೀರಿ, ಏಕೆಂದರೆ ಈಗ ಬಳ್ಳಾರಿ ರಸ್ತೆಯಲ್ಲಿ ಜನರು ಓಡಾಡುವುದಕ್ಕೆ ರಸ್ತೆ ಇಕ್ಕಟಾಗಿದೆ, ಇನ್ನೊಂದು ನಾಲ್ಕು ಪಥದ ರಸ್ತೆಯ ಒಂದು ಕಾರಿಡಾರ್ ರಸ್ತೆಯನ್ನು ದೇವನಹಳ್ಳಿ ಏರ್‌ಪೋರ್ಟ್‌ಗೆ ಈ ಬಾಗಲೂರು ರೋಡ್ ಮುಖಾಂತರ ರೋಡ್‌ನ್ನು ಮಾಡುತ್ತೇವೆಂದು ಅವತ್ತು ಉತ್ತರವನ್ನು ಕೊಡುವಾಗ ಹೇಳಿದ್ದರು. ಅದನ್ನು ತಾವು ಏನು ಮಾಡಿದ್ದೀರಿ? ಈಗೇನಾದರೂ ಮಾಡುತ್ತೀರಾ ಅಥವಾ ಇಲ್ಲವಾ ಎಂಬುದನ್ನು ತಿಳಿಸಬೇಕು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಈಗ as it is ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನೀವು ಕೇಳುತ್ತಿರುವಂತಹ ಲೀಸ್ ರೆಂಟ್ ? ಲೀಸ್ ರೆಂಟ್ 3 ಪರ್ಸೆಂಟ್ 6 ಪರ್ಸೆಂಟ್ ಬಿಗಿನಿಂಗ್‌ನಲ್ಲಿ ಕೊಡುತ್ತಾರೆಂದು ಅಗ್ರಿಮೆಂಟ್‌ನಲ್ಲಿ ಒಂದು ಸಿಗ್ನೆಚರ್ ಆಗಿದೆ, ಇವರು ಒಂದು ಪ್ರತ್ಯೇಕವಾದಂತಹ ರಸ್ತೆಯ ಬಗ್ಗೆ ಕೇಳುತ್ತಿದ್ದಾರೆ, as it is between Devanahalli and Bangalore ರೋಡ್‌ನ್ನು ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾದವರು 6 ಲೈನ್ ಹಾಗ ಮಾಡುತ್ತಿದ್ದಾರೆ, ಇದು ಸಧ್ಯಕ್ಕೆ ಸಾಕು ಅಂತ ಕಾಣುತ್ತದೆ. ಉಳಿದಿರತಕ್ಕಂತಹ ಪ್ರತ್ಯೇಕವಾದಂತಹ ರಸ್ತೆಯ ಬಗ್ಗೆ ಕೇಳಿದ್ದಾರೆ, ಅದು ಪ್ರತ್ಯೇಕವಾದಂತಹ ಪ್ರಶ್ನೆಯಾಗುತ್ತದೆ. ಈ ರಸ್ತೆಗಳನ್ನು ಮಾಡುವುದರ ಬಗ್ಗೆ ಲ್ಯಾಂಡ್ ಆಕ್ಸಿಜಿಷನ್ ಮಾಡುವುದರ ಬಗ್ಗೆ, ಮತ್ತೊಂದರ ಬಗ್ಗೆ ಇಲ್ಲಿ ನಾನು ಏನೇ ತರಹದ ಹೇಳಿಕೆಗಳನ್ನು ಕೊಟ್ಟರೂ ಅದರ ಮೇಲೆ ಬಹಳ ಪರಿಣಾಮ ಆಗುವುದರಿಂದ ನಾನು ಈ ಸಂದರ್ಭದಲ್ಲಿ ಆ ವಿಚಾರದ ಬಗ್ಗೆ ಏನು ಹೇಳುವುದಕ್ಕಾಗುವುದಿಲ್ಲ.

**ಅಧ್ಯಕ್ಷರು** : ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನಾನು ಏನೂ ಕೇಳಲ್ಲಿಲ್ಲ. ಮಾನ್ಯ ಸಚಿವರ ಉತ್ತರ ಅಷ್ಟು ಉದ್ದ ಇದೆಯಲ್ಲಾ ಈ ಬೆಂಗಳೂರು ಏರ್‌ಪೋರ್ಟ್. ಬಗ್ಗೆ ತಾವು ಉತ್ತರವನ್ನು ಕೊಡಿಸಬೇಕು. ಬೆಂಗಳೂರು ಏರ್‌ಪೋರ್ಟ್‌ನ ಪರಿಸ್ಥಿತಿ ಏನು ?

**ಅಧ್ಯಕ್ಷರು** : ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೇ, ತಾವು ದಯವಿಟ್ಟು ಕುಳಿತುಕೊಳ್ಳಬೇಕು. ನಾನು ಮಾನ್ಯ ಜಯಪ್ರಕಾಶ್ ಹೆಗ್ಡೆಯವರ ಹೆಸರನ್ನು ಕರೆದಿದ್ದೇನೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ತಾವು ಸಮರ್ಪಕವಾಗಿ ಉತ್ತರವನ್ನು ಕೊಡುತ್ತಿದ್ದೀರಿ. ದಯವಿಟ್ಟು ಇದರ ಬಗ್ಗೆ ಉತ್ತರವನ್ನು ಕೊಡಬೇಕು. ಮಾನ್ಯ ಅಧ್ಯಕ್ಷರೆ, ತಾವು ಹೀಗೆ ಮಾಡಿದರೆ ಹೇಗೆ ?

**ಅಧ್ಯಕ್ಷರು** : ಪ್ರಶ್ನೋತ್ತರ ವೇಳೆಯನ್ನು ಆದಷ್ಟು ಬೇಗನೆ ಮುಗಿಸಬೇಕು.

**ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು** : ತಾವು ನನಗೆ ಅವಕಾಶವನ್ನು ಕೊಡುವುದಿಲ್ಲವೆಂದರೆ ಹೇಗೆ ? ಇದರ ಬಗ್ಗೆ ಯಾರು ಉತ್ತರ ಕೊಡುತ್ತಾರೆ ಸ್ವಾಮಿ ?

**ಅಧ್ಯಕ್ಷರು** : ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

**ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು** : ತಾವು ಕೋಪವನ್ನು ಮಾಡಿಕೊಂಡರೆ ಹೇಗೆ ಸ್ವಾಮಿ. ತಾವು ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ.

**ಅಧ್ಯಕ್ಷರು** : ನಾನು ಕೋಪವನ್ನು ಮಾಡಿಕೊಳ್ಳುತ್ತಿಲ್ಲ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನಾನು ಬೆಂಗಳೂರು ಏರ್‌ಪೋರ್ಟ್‌ನ ಬಗ್ಗೆ ಕೇಳುತ್ತಿದ್ದೇನೆ.

**ಅಧ್ಯಕ್ಷರು** : ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನಮಗೆ ಉತ್ತರವನ್ನು ಕೊಡಿಸಿಬಿಡಿ ಅಷ್ಟೇ ಸಾಕು ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** ; ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ರೀತಿ ಮಾಡುತ್ತಿರುವರು ಸರಿಯಲ್ಲ. ಮಾನ್ಯ ಅಧ್ಯಕ್ಷರು ಅಷ್ಟು ಹೇಳಿದರೂ ಕೂಡ ಕುಳಿತುಕೊಳ್ಳದೆ ನಿಂತಿದ್ದರೆ ಹೇಗೆ ? ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್‌ಹೆಗ್ಡೆಯವರು ಪ್ರಶ್ನೆಯನ್ನು ಪ್ರಾರಂಭ ಮಾಡಿದ್ದಾರೆ. ನೀವು ಮಾತನಾಡುತ್ತಿದ್ದಿರಲ್ಲಾ ಅದು ಹೇಗೆ ?

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನೀವು ಹಾಗೆಯೇ ಮಾಡುತ್ತೀರಾ ? ನೀವು ಹೇಗೆ ಎಷ್ಟು ನಿಮಿಷ ಮಾತನಾಡುತ್ತೀರಿ ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅಧ್ಯಕ್ಷರು ಒಂದು ಸಾರಿ ಕುಳಿತುಕೊಳ್ಳಿ ಎಂದು ನಿಮಗೆ ಹೇಳಿದ ಮೇಲೆ ತಾವು ಕುಳಿತುಕೊಳ್ಳಬೇಕು.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನೀವು ಹಾಗೆ ಮಾಡುತ್ತೀರಾ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಹೌದು. ನಾನು ಅಧ್ಯಕ್ಷರು ಹೇಳಿದ ಮೇಲೆ ಕೊರುತ್ತೇನೆ. ಅವರು ಇನ್ನೊಂದು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ನೀವು ಉತ್ತರ ಕೊಡುವ ತನಕ ಬಿಡುವುದಿಲ್ಲ. ನೀವು ಮಾತನಾಡುವಾಗ ಒಂದು ನೀತಿ, ನಾವು ಮಾತನಾಡುವಾಗ ಒಂದು ನೀತಿಯೇ ?

**ಶ್ರೀ ಜಿ.ಎ: ಶ್ರೀರಾಮರೆಡ್ಡಿ** : ಅಧ್ಯಕ್ಷರು ಬೇರೆಯವರಿಗೆ ಅವಕಾಶವನ್ನು ಕೊಟ್ಟಿದ್ದಾರೆ. ಗೊಂದಲ

**ಅಧ್ಯಕ್ಷರು** : ನಾನು ಈ 3 ಉಪಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಬೇರೆಯವರು ಪ್ರಶ್ನೆಗಳನ್ನು ಕೇಳಬಾರದಾ ? ಬೇರೆಯವರು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ತಾವು ಹಿರಿಯ ಸದಸ್ಯರಾಗಿದ್ದು ಸಹಕರಿಸಬೇಕು.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಸಪ್ಲಮೆಂಟರಿ ಕೇಳುವ ಬಗ್ಗೆ ಅವಕಾಶವನ್ನು ಕೇಳಿದೆ, ಮಾನ್ಯ ಅಧ್ಯಕ್ಷರು ಆಗುವುದಿಲ್ಲವೆಂದು ತಕ್ಷಣ ನಾನು ಕುಳಿತುಕೊಂಡೆ. ಈಗ ನನ್ನ ಪ್ರಶ್ನೆಯನ್ನು ಪ್ರಾರಂಭ ಮಾಡಿದಾಗ ನೀವು ಮಧ್ಯದಲ್ಲಿ ಮಾತನಾಡಿದರೆ ಅದಕ್ಕೆ ಅರ್ಥವಿಲ್ಲ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ಹಾಗಾದರೆ ನಾವು ಪ್ರಶ್ನೆಯನ್ನು ಕೇಳಬಾರದಾ ?

**ಅಧ್ಯಕ್ಷರು** : ಕೇಳಲೇ ಬಾರದು ಎಂದು ನಾವು ಹೇಳಲಿಲ್ಲ. ಮೂರು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ತಾವು ನಾಲ್ಕನೆಯ ಉಪಪ್ರಶ್ನೆಯನ್ನು ಕೇಳುತ್ತಿದ್ದೀರಿ.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** : ಒಂದೇ ಒಂದು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಮಾನ್ಯ ಅಧ್ಯಕ್ಷರೆ.

**ಅಧ್ಯಕ್ಷರು** : ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಬೆಂಗಳೂರು ನಗರ ಗ್ರಾಮಾಂತರ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿ ಸ್ವಾಧೀನ ಪಡಿಸಿಕೊಂಡ ಜಮೀನು.**

53(326) ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರ/ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿ ಕೊಂಡಿರುವುದು (ಸ್ಥಳವಾರು ವಿವರ ನೀಡುವುದು) :

ಆ) ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಮಂಡಳಿ ಅಭಿವೃದ್ಧಿಪಡಿಸಿದೆ :

ಇ) ಇದಕ್ಕೆ ಖರ್ಚಾದ ಮೊತ್ತವೆಷ್ಟು ?

ಈ) ಯಾವ ಯಾವ ರಷ್ತು ಉದ್ದೇಶಿತ ಕೈಗಾರಿಕೆಗಳಿಗೆ ಭೂಮಿಯನ್ನು ನೀಡಲಾಗಿದೆ ;

ಉ) ಕೈಗಾರಿಕಾ ಕ್ಷೇತ್ರವಲ್ಲದ ಎಷ್ಟು ಸಂಸ್ಥೆಗಳಿಗೆ ಈ ಭೂಮಿಯನ್ನು ನೀಡಲಾಗಿದೆ (ವಿವರ ನೀಡುವುದು) ?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ (1-4-2003 ರಿಂದ 30-6-2004) ಬೆಂಗಳೂರು ನಗರ ಮತ್ತು ಗಾಮಾಂತರ ಜಿಲ್ಲೆಗಳಲ್ಲಿ 1528 ಎಕರೆ 02 ಗುಂಟೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ (ಸ್ಥಳವಾರು ವಿವರ ಲಗತ್ತಿಸಿದೆ). ವಿವರಗಳನ್ನು ಲಗತ್ತಿಸಿರುವ ಅಡಕ-1ರ (8) ನೇ ಕಲಂನಲ್ಲಿ ತೋರಿ[illegible]